DW-02

ಸಾಕ್ಷಿಯನ್ನು ಇಂದು ದಿ.13-03-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಿ, ಮುಂದುವರೆದ ಪಾಟೀಸವಾಲಿಗೆ ಒಳಪಡಿಸಲಾಯಿತು.

ಮುಂದುವರೆದ ಪಾಟೀಸವಾಲುಃ- ವಾದಿ ಪರ ವಕೀಲರಿಂದ.

ವಾದಿ ನನ್ನ ಚಿಕ್ಕಪ್ಪ. ಈ ದಾವೆಯನ್ನು ವಾದಿಯು ಜಮೀನು ಸರ್ವೆ ನಂ.112/1 ಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿದ್ದಾರೆ. ಈ ದಾವೆಯಲ್ಲಿ ವಾದಿಯು ಏನು ಪರಿಹಾರ ಕೇಳಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯನ್ನು ತಮಗೆ ದಾವಾ ಆಸ್ತಿಯಲ್ಲಿ ಅಧಿಕಾರವಿದೆ , ಹಕ್ಕು ಮತ್ತು ಹಿತಾಸಕ್ತಿ ಇದೆ, ಪ್ರತಿವಾದಿಗಳಿಗೆ ಯಾವ್ಹೋ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದು ದಾವೆ ಸಲ್ಲಿಸಿರುತ್ತಾರೆ. ಈ ದಾವೆಯನ್ನು ವಾದಿಯು ನಮ್ಮ ಕುಟುಂಬದ ಮೇಲೆ ಮತ್ತು ಶೇಖರಪ್ಪನ ಮೇಲೆ ಸಲ್ಲಿಸಿದ್ದಾರೆ . ವಾದಿ , ನನ್ನ ತಂದೆ ಮತ್ತು 2 ನೇ ಪ್ರತಿವಾದಿಗಳು ಖಾಸಾ ಅಣ್ಣ-ತಮ್ಮಂದಿರು ಎಂದರೆ ಸರಿ. ನನ್ನ ತಂದೆ ದಿ.10-03-2010 ರಂದು ನಿಧನ ಹೊಂದಿರುತ್ತಾರೆ. ಸಾಕ್ಷಿಗೆ ವಾದಿ, ನಮ್ಮ ತಂದೆ ಮತ್ತು 2 ನೇ ಪ್ರತಿವಾದಿಯವರ ಜೀವಿತ ಕಾಲದಲ್ಲಿ ಕುಟುಂಬದಲ್ಲಿ ವಿಭಾಗವಾಗಿರುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು - ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. 1983 ನೇ ಸಾಲಿನಲ್ಲಿ ವಾದಿ, ನಮ್ಮ ತಂದೆ ಮತ್ತು 2 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡಿದ್ದು , ಆ ಸಮಯದಲ್ಲಿ ನಾನು ಹುಟ್ಟಿರುವುದಿಲ್ಲ, ಆದ ಕಾರಣ ಸದರಿ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರು ಫೋಟೋಗಳನ್ನು ತೋರಿಸಿ, ಅದರಲ್ಲಿರುವುದು ಯಾರು ಎಂದು ಕೇಳಿದಾಗ ಸಾಕ್ಷಿಯು ನಮ್ಮ ಚಿಕ್ಕಪ್ಪ ಅಂದರೆ ವಾದಿ ಎಂದು ಒಪ್ಪಿಕೊಂಡಿದ್ದರಿಂದ ಸದರಿ ಫೋಟೋಗಳನ್ನು ನಿಪಿ.29 ರಿಂದ 34 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊನ್ನಾಳಿ.